**ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ**
**ಜೇವರ್ಗಿ**

**ಸಿಸಿ ನಂ.14/2022**

**ಚಾಸಾ-2/ಪಿಡಬ್ಲೂ-3**

| | |
|---|---|
| **ಹೆಸರು** | ಜಗದೀಶ |
| **ತಂದೆ ಹೆಸರು** | ದೇವಿಂದ್ರಪ್ಪ |
| **ವಯಸ್ಸು** | 27 ವರ್ಷಗಳು |
| **ಉದ್ಯೋಗ** | ಒಕ್ಕಲುತನ |
| **ವಾಸ ಸ್ಥಳ** | ಯಾತನೂರ |

**ದಿನಾಂಕ 11.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದಃ**

ಚಾಸಾ-3 ನನಗೆ ಗೊತ್ತಿಲ್ಲ. ಈಗ ನಾನು ಒಂದು ದಾಖಲೆ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ 3-4 ವರ್ಷಗಳ ಹಿಂದೆ ಯಾತನೂರ ಗ್ರಾಮದ ಒಂದು ಹೊಲದಲ್ಲಿ ಮಧ್ಯಾಹ್ನ 1 ರಿಂದ 2 ಗಂಟೆಯ ಅವಧಿಯಲ್ಲಿ ಮಾಡಿರುತ್ತೇನೆ. ಸದರಿ ಸಹಿಯನ್ನು ಯಾವ ವಿಚಾರಕ್ಕೆ ಪೊಲೀಸರು ಪಡೆದುಕೊಂಡರು ಎಂದರೆ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಏನನ್ನು ವಶ ಪಡಿಸಿಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಸ.ಸ.ಅರವರು ಅನುಮತಿಯುನ್ನ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 06.05.2021 ರಂದು ಮಧ್ಯಾಹ್ನ 1.00 ರಿಂದ 2.00 ರ ಸಮಯದಲ್ಲಿ ಯಾತ ಗ್ರಾಮದ ಸರ್ವೆ ನಂ.322/8 ರಲ್ಲಿ ಆರೋಪಿತರು ಅಕ್ರಮವಾಗಿ 25 ಟಿಪ್ಪರನಷ್ಟು ಮರಳನ್ನು ಸಂಗ್ರಹಿದ್ದು ಪೊಲೀಸರು ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ದಾಳಿ ಮಾಡಿ 25 ಟಿಪ್ಪರನಷ್ಟು ಮರಳನ್ನು ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಾನು ಹಾಜರಿದ್ದು ನಿಪಿ-2ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಷಯ ಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ